**Akashvani : Bangalore**
**National Bulletin In Kannada**
**03.11.2024 / 7.35 am**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**03.11.2024 / 7.35 am**

**<><*<><>*><>**

## ಮುಖ್ಯಾಂಶಗಳು

**೧. ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಇಂದಿನಿಂದ ಆಸ್ಟ್ರೇಲಿಯಾ -ಸಿಂಗಾಪುರ್ ಪ್ರವಾಸ**

**೨. ಭಾರತೀಯ ನವೋದ್ಯಮಗಳಲ್ಲಿ ೧೨.೨ ಶತಕೋಟಿ ಡಾಲರ್‌ಗೆ ತಲುಪಿದ ಬಂಡವಾಳ ಹೂಡಿಕೆ; ಬೆಂಗಳೂರಿನ ಸ್ಟಾರ್ಟ್‌ಅಪ್‌ಗಳಿಗೆ ಶೇಕಡ ೪೧ ರಷ್ಟು ಪಾಲು**

**೩. ನವದೆಹಲಿಯಲ್ಲಿ ಇದೇ ೫ ಮತ್ತು ೬ ರಂದು ಮೊದಲ ಏಷ್ಯನ್ ಬೌದ್ಧ ಶೃಂಗಸಭೆ ಆಯೋಜನೆ**

**೪. ಹೈಲೋ ಓಪನ್ ಬ್ಯಾಡ್ಮಿಂಟನ್; ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಫೈನಲ್ ಪ್ರವೇಶಿಸಿದ ಭಾರತದ ಮಾಳವಿಕಾ ಬನ್ಸೋದ್**

**<><*<><>*><>**

ಕೇಂದ್ರ ವಿದೇಶಾಂಗ ವ್ಯವಹಾರ ಖಾತೆ ಸಚಿವ ಡಾ.ಎಸ್.ಜೈಶಂಕರ್, ಆಸ್ಟ್ರೇಲಿಯಾ ಮತ್ತು ಸಿಂಗಾಪುರ್ ಭೇಟಿಗಾಗಿ ಇಂದಿನಿಂದ ಆರು ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ. ಡಾ.ಎಸ್.ಜೈಶಂಕರ್ ಅವರು, ಬ್ರಿಸ್‌ಬೇನ್‌ನಲ್ಲಿ ಭಾರತದ ನಾಲ್ಕನೇ ಕಾನ್ಸೊಲೇಟ್ ಉದ್ಘಾಟಿಸಲಿದ್ದಾರೆ. ಕೆನಬೆರಾದಲ್ಲಿ ಆಸ್ಟ್ರೇಲಿಯದ ವಿದೇಶಾಂಗ ಸಚಿವ ಪಿನ್ನಿವೋಂಗ್ ಅವರೊಂದಿಗೆ ವಿದೇಶಾಂಗ ಸಚಿವರ ೧೫ನೇ ಚೌಕಟ್ಟು ಮಾತುಕತೆಯ ಸಹಅಧ್ಯಕ್ಷತೆ ವಹಿಸಲಿದ್ದಾರೆ. ಆಸ್ಟ್ರೇಲಿಯಾದ ಸಂಸತ್ತಿನಲ್ಲಿ ನಡೆಯಲಿರುವ ಎರಡನೇ ರೈಸಿನಾ ಡೌನ್ ಅಧಿವೇಶನದ ಉದ್ಘಾಟನಾ ಸಮಾರಂಭದಲ್ಲಿ ಪ್ರದಾನ ಭಾಷಣ ಮಾಡಲಿದ್ದಾರೆ. ಆಸ್ಟ್ರೇಲಿಯಾದ ನಾಯಕರು, ಸಂಸದರು, ಭಾರತೀಯ ಸಮುದಾಯದ ಧುರೀಣರು, ವ್ಯಾಪಾರ ಸಮುದಾಯದವರೊಂದಿಗೆ ಅವರು ಮಾತುಕತೆ ನಡೆಸಲಿದ್ದಾರೆ. ನಂತರ ಡಾ.ಎಸ್.ಜೈಶಂಕರ್ ಅವರು, ಇದೇ ೮ ರಂದು ಸಿಂಗಾಪುರಕ್ಕೆ ತೆರಳಿ, ಭಾರತ-ಆಸಿಯಾನದ ೮ನೇ ದುಂಡು ಮೇಜಿನ ವಿಚಾರ ಮಂಥನ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧ ಬಲಪಡಿಸುವುದರ ಬಗ್ಗೆಯೂ ಸಿಂಗಾಪುರದ ಧುರೀಣರೊಂದಿಗೆ ಮಾತುಕತೆ ನಡೆಸಲಿದ್ದಾರೆ.

**<><*<><>*><>**

ಭಾರತೀಯ ನವೋದ್ಯಮಗಳಲ್ಲಿ ಬಂಡವಾಳ ಹೂಡಿಕೆ ಮೊತ್ತ ಕಳೆದ ಹತ್ತು ತಿಂಗಳಲ್ಲಿ ೧೨.೨ ಶತಕೋಟಿ ಡಾಲರ್‌ಗೆ ತಲುಪಿದೆ. ಈ ವರ್ಷ ಪೂರ್ಣಗೊಳ್ಳಲು ಇನ್ನೂ ಎರಡು ತಿಂಗಳು ಬಾಕಿ ಇರುವಾಗಲೇ ೨೦೨೩ ರ ಒಟ್ಟು ಹೂಡಿಕೆ ಮೊತ್ತವನ್ನು ಇದು ಮೀರಿಸಿದೆ. ಅಕ್ಟೋಬರ್ ತಿಂಗಳಲ್ಲಿ ೧೧೯ ಒಪ್ಪಂದದ ಮೂಲಕ ೧ ಶತಕೋಟಿ ಡಾಲರ್ ಹೂಡಿಕೆಯಾಗಿದ್ದು, ಈ ಪೈಕಿ ಬೆಂಗಳೂರು ಮೂಲದ ನವೋದ್ಯಮಗಳಲ್ಲಿನ ಪಾಲು ಶೇಕಡ ೪೧.೮೪ ರಷ್ಟಿದೆ. ೧.೬೩ ಶತಕೋಟಿ ಡಾಲರ್‌ಗಳೊಂದಿಗೆ ಸೆಪ್ಟೆಂಬರ್ ಎರಡನೇ ಅತಿ ಹೆಚ್ಚು ಹಣ ಹೂಡಿಕೆ ಕಂಡಿದ್ದರೆ, ಜೂನ್‌ನಲ್ಲಿ ಗರಿಷ್ಠ ೧.೯೨ ಶತಕೋಟಿ ಡಾಲರ್ ಹೂಡಿಕೆ ದಾಖಲಾಗಿತ್ತು. ಕಳೆದ ತಿಂಗಳು, ಪ್ರಧಾನಿ ನರೇಂದ್ರ

ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ, ಬೆಳೆಯುತ್ತಿರುವ ಬಾಹ್ಯಾಕಾಶ ಕ್ಷೇತ್ರಕ್ಕೆ ಮೀಸಲಾಗಿರುವ ೧ ಸಾವಿರ ಕೋಟಿ ರೂಪಾಯಿಗಳ ವೆಂಚರ್ ಬಂಡವಾಳ ನಿಧಿಯನ್ನು ಸ್ಥಾಪಿಸಲು ಅನುಮೋದನೆ ನೀಡಿತು. ಈ ಉದ್ದೇಶಿತ ನಿಧಿಯ ನಿಯೋಜನೆಯ ಅವಧಿಯು ನಿಧಿ ಕಾರ್ಯಾಚರಣೆಗಳ ಪ್ರಾರಂಭದಿಂದ ಐದು ವರ್ಷಗಳವರೆಗೆ ಇರಲಿದೆ.

<><*<><>*><>

ಅಂತರರಾಷ್ಟ್ರೀಯ ಬೌದ್ಧ ಒಕ್ಕೂಟದ ಸಹಯೋಗದೊಂದಿಗೆ ಕೇಂದ್ರ ಸಂಸ್ಕೃತಿ ಸಚಿವಾಲಯ ಮೊದಲ ಏಷ್ಯನ್ ಬೌದ್ಧ ಶೃಂಗಸಭೆಯನ್ನು ಇದೇ ೫ ಮತ್ತು ೬ ರಂದು ನವದೆಹಲಿಯಲ್ಲಿ ಆಯೋಜಿಸುತ್ತಿದೆ. ಈ ಶೃಂಗಸಭೆಯ ವಿಷಯ 'ಏಷ್ಯಾವನ್ನು ಬಲಪಡಿಸುವಲ್ಲಿ ಬುದ್ಧ ಧಮ್ಮದ ಪಾತ್ರ' ಎಂಬುದಾಗಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಮುಖ್ಯ ಅತಿಥಿಯಾಗಿ ಭಾಗವಹಿಸುವ ನಿರೀಕ್ಷೆಯಿದೆ. ಈ ಶೃಂಗಸಭೆಯು ಸಂವಾದ ಮತ್ತು ತಿಳುವಳಿಕೆಯನ್ನು ಉತ್ತೇಜಿಸಲು ಹಾಗೂ ಬೌದ್ಧ ಸಮುದಾಯ ಎದುರಿಸುತ್ತಿರುವ ಸಮಕಾಲೀನ ಸವಾಲುಗಳನ್ನು ಪರಿಹರಿಸಲು ಏಷ್ಯಾದಾದ್ಯಂತದ ವಿವಿಧ ಬೌದ್ಧ ಸಂಪ್ರದಾಯಗಳ ಸಂಘ ನಾಯಕರು, ವಿದ್ವಾಂಸರು, ತಜ್ಞರಿಗೆ ವೇದಿಕೆ ಕಲ್ಪಿಸುತ್ತದೆ.  ಭಾರತ ಮತ್ತು ಏಷ್ಯಾದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಬೌದ್ಧಧರ್ಮ ವಿಶಿಷ್ಟ ಸ್ಥಾನವನ್ನು ಹೊಂದಿದೆ.

<><*<><>*><>

ಭಾರತ ಪ್ರವಾಸದಲ್ಲಿರುವ ಥೈಲೆಂಡ್‌ನ ವಿದೇಶಾಂಗ ವ್ಯವಹಾರಗಳ ಖಾತೆ ಸಚಿವ ಮಾರೀಸ್ ಸಂಗಿಯಾಂಪೊಂಗಸ್, ನವದೆಹಲಿಯಲ್ಲಿ ನಿನ್ನೆ ಭಾರತದ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಉಭಯ ದೇಶಗಳ ವಿವಿಧೋದ್ದೇಶಿತ ಸಹಕಾರ ಮತ್ತು ಪ್ರಾದೇಶಿಕ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿದ್ದಾಗಿ ಡಾ.ಎಸ್.ಜೈಶಂಕರ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಗುರುವಾರ ನವದೆಹಲಿಗೆ ಆಗಮಿಸಿದ ಥೈಲೆಂಡ್‌ನ ಸಚಿವ ಮಾರೀಸ್‌ಸಂಗಿಯಾಂಪೊಂಗಸ್, ನಿನ್ನೆ ವಿವೇಕಾನಂದ ಅಂತಾರಾಷ್ಟ್ರೀಯ ಪ್ರತಿಷ್ಠಾನದ ಸದಸ್ಯರೊಂದಿಗೆ ವಿಚಾರ ವಿನಿಮಯ ನಡೆಸಿದರು. 'ಟು ವರ್ಡ್ಸ್ ದ ಏಷಿಯನ್ ಸೆಂಚುರಿ ಆಫ್ ದಮ್ಮಾ' ಕುರಿತಂತೆ ವಿಶೇಷ ಉಪನ್ಯಾಸ ನೀಡಿದ ಅವರು, ಜಗತ್ತಿನಲ್ಲಿ ಶಾಂತಿ ಮತ್ತು ಸುಸ್ಥಿರತೆಯನ್ನು ಕಾಪಾಡಿಕೊಂಡು ಬರಲು ಭಗವಾನ್ ಬುದ್ಧರ ಉಪದೇಶಗಳನ್ನು ಸಾರುವಲ್ಲಿ ಭಾರತ-ಥೈಲೆಂಡ್ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು.

<><*<><>*><>

ಉತ್ತರಪ್ರದೇಶದ ಕಾನ್ಪುರದಲ್ಲಿರುವ ಭಾರತದ ಆಧುನಿಕ ಶಸ್ತ್ರಾಸ್ತ್ರ ಮತ್ತು ಉಪಕರಣಗಳ ಸಂಸ್ಥೆಯ ಫೀಲ್ಡ್ ಗನ್ ಕಾರ್ಖಾನೆಗೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ನಿನ್ನೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಟಿ-೯೦ ಟ್ಯಾಂಕ್ ಮತ್ತು ಧನುಷ್ ಗನ್ ಸೇರಿದಂತೆ ವಿವಿಧ ಶಸ್ತ್ರಾಸ್ತ್ರ ಗನ್‌ಗಳು ಮತ್ತು ಟ್ಯಾಂಕರ್‌ಗಳನ್ನು ಈ ಕಾರ್ಖಾನೆಯಲ್ಲಿ ತಯಾರಿಸಲಾಗುತ್ತದೆ. ರಾಜನಾಥ್ ಸಿಂಗ್, ಪ್ರಮುಖ ದೇಶಿಯ ರಕ್ಷಣಾ ಸಾಮರ್ಥ್ಯಗಳನ್ನು ವೀಕ್ಷಿಸಿದರು. ಕೇಂದ್ರ ಸರ್ಕಾರ ರಕ್ಷಣಾ ವಲಯಕ್ಕೆ ಆದ್ಯತೆ ನೀಡುತ್ತಿದ್ದು, ದೇಶೀಯ ತಯಾರಿಕೆ ಬಲವರ್ಧನೆ ಮೂಲಕ ೨೦೨೮-೨೯ ರ ವೇಳೆಗೆ ೫೦ ಸಾವಿರ ಕೋಟಿ ರೂಪಾಯಿ ಮೌಲ್ಯದ ರಕ್ಷಣಾ ಸಲಕರಣೆ ರಫ್ತು ಮಾಡುವ ಉದ್ದೇಶವಿದೆ ಎಂದು ಸಚಿವರು ಇತ್ತೀಚೆಗೆ ಹೇಳಿದ ಹಿನ್ನಲೆಯಲ್ಲಿ ಪ್ರಸ್ತುತ ಭೇಟಿ ಮಹತ್ವದ್ದೆನಿಸಿದೆ. ಸರ್ಕಾರಕ್ಕೆ ರಕ್ಷಣಾ ಉಪಕರಣಗಳ ಬಲವರ್ಧನೆಯಲ್ಲಿ ಹಿಂದೂಸ್ತಾನ್ ಏರೋನಾಟಿಕಲ್ ಲಿಮಿಟೆಡ್, ಟಾಟಾ ಮತ್ತು

ಎಲ್‌ಎನ್‌ಟಿ ಗಳಂತಹ ದೇಶೀಯ ಕಂಪನಿಗಳ ಸಾಮರ್ಥ್ಯದಲ್ಲಿ ವಿಶ್ವಾಸವಿದೆ ಎಂದು ರಕ್ಷಣಾ ಸಚಿವರು ಹೇಳಿರುವುದು ಗಮನಾರ್ಹವಾಗಿದೆ.

<><*<><>*><>

ಭಾರತ-ಚೀನಾ ನಡುವಿನ ಪರಸ್ಪರ ತಿಳಿವಳಿಕೆಯಂತೆ ಡೆಮ್‌ಚಾಕೊ ಮತ್ತು ಡೆಪ್ಸಂಗ್ ವಲಯಗಳಲ್ಲಿ ಭದ್ರತಾ ಗಸ್ತು ಪರಿಶೀಲನಾ ಕಾರ್ಯ ಆರಂಭವಾಗಿದೆ. ವಿದೇಶಾಂಗ ವ್ಯವಹಾರ ಸಚಿವಾಲಯದ ವಕ್ತಾರ ರಣದೀರ್ ಜೈಸ್ವಾಲ್ ನವದೆಹಲಿಯಲ್ಲಿ ನಿನ್ನೆ ಈ ವಿಷಯ ತಿಳಿಸಿದ್ದಾರೆ. ಕಜಾನ್‌ದಲ್ಲಿ ಇತ್ತೀಚೆಗೆ ನಡೆದ ಸಭೆಯ ಒಪ್ಪಂದದಂತೆ ಚೀನಾ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸಲು ವಿದೇಶಾಂಗ ಸಚಿವರ ಹಾಗೂ ಅಧಿಕಾರಿ ಮಟ್ಟದ ಮಾತುಕತೆ ವ್ಯವಸ್ಥೆಯನ್ನು ಬಳಸಿಕೊಳ್ಳಲಾಗುವುದು ಎಂದು ಅವರು ಹೇಳಿದರು.

<><*<><>*><>

ಜಾರ್ಖಂಡ್ ವಿಧಾನಸಭಾ ಚುನಾವಣೆಗಾಗಿ ಬಿಜೆಪಿ, ಇಂದು ತನ್ನ ಪ್ರಣಾಳಿಕೆ-ಸಂಕಲ್ಪ ಪತ್ರವನ್ನು ಬಿಡುಗಡೆ ಮಾಡಲಿದೆ. ರಾಂಚಿಯಲ್ಲಿ ನಡೆಯಲಿರುವ ಪಕ್ಷದ ಸಮಾರಂಭದಲ್ಲಿ ಬಿಜೆಪಿ ನಾಯಕ ಹಾಗೂ ಕೇಂದ್ರ ಸಚಿವ ಅಮಿತ್ ಪ್ರಣಾಳಿಕೆ ಬಿಡುಗಡೆ ಮಾಡಲಿದ್ದಾರೆ. ಜಾರ್ಖಂಡ್ ಚುನಾವಣೆ ಉಸ್ತುವಾರಿ ವಹಿಸಿರುವ ಬಿಜೆಪಿ ಹಿರಿಯ ಧುರೀಣ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಈ ವಿಷಯ ತಿಳಿಸಿದ್ದಾರೆ. ಪ್ರಣಾಳಿಕ ಬಿಡುಗಡೆ ನಂತರ ಅಮಿತ್ ಶಾ ಅವರು, ದಲ್ಟುಮ್‌ಘರ್, ಬರ್ಕಾತ್ ಮತ್ತು ಸಿಮಾರಿಯಾಗಳಲ್ಲಿ ಚುನಾವಣೆ ರ್‍ಯಾಲಿ ಉದ್ದೇಶಿಸಿ ಮಾತನಾಡಲಿದ್ದಾರೆ. ಜಾರ್ಖಂಡ್‌ನ ೮೧ ವಿಧಾನಸಭಾ ಕ್ಷೇತ್ರಗಳಲ್ಲಿ ಎರಡು ಹಂತದಲ್ಲಿ ಚುನಾವಣೆ ನಡೆಯಲಿದೆ. ಮತದಾನ ಈ ತಿಂಗಳ ೧೩ ಹಾಗೂ ೨೦ ರಂದು ನಿಗದಿಯಾಗಿದ್ದು, ಮತ ಎಣಿಕೆ ೨೩ ರಂದು ನಡೆಯಲಿದೆ. ಒಟ್ಟು ೧ ಸಾವಿರದ ೨೧೧ ಅಭ್ಯರ್ಥಿಗಳು ಕಣದಲ್ಲಿದ್ದಾರೆ.

<><*<><>*><>

ತಮಿಳುನಾಡು, ಪುದುಚೇರಿ, ಕಾರೈಕಲ್, ಕೇರಳ ಮತ್ತು ಮಾಹೆಯಲ್ಲಿ ಇಂದು ಗುಡುಗು, ಮಿಂಚು ಸಹಿತ ಭಾರೀ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮುಂದಿನ ನಾಲ್ಕು ದಿನಗಳಲ್ಲಿ ವಾಯುವ್ಯ ಮತ್ತು ಪೂರ್ವ ಭಾರತದಲ್ಲಿ ಕನಿಷ್ಠ ಮತ್ತು ಗರಿಷ್ಠ ತಾಪಮಾನ ಎರಡರಿಂದ ಮೂರು ಡಿಗ್ರಿ ಸೆಲ್ಸಿಯಸ್‌ನಿಂದ ಕ್ರಮೇಣವಾಗಿ ಕುಸಿಯುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿಯೂ ಇದೇ ತಿಂಗಳ ೫ ರಂದು ಭಾರೀ ಮಳೆಯಾಗುವ ಸಾಧ್ಯತೆಯಿದೆ. ಮುಂದಿನ ೨-೩ ದಿನಗಳಲ್ಲಿ ದೆಹಲಿ ಹಾಗೂ ಸುತ್ತಮುತ್ತ ರಾತ್ರಿ ಮತ್ತು ಬೆಳಗಿನ ಸಮಯದಲ್ಲಿ ಹೊಂಜು ಮತ್ತು ಮಂಜು ಮುಸುಕುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

<><*<><>*><>

ಚಳಿಗಾಲ ಆಗಮನದ ಹಿನ್ನೆಲೆಯಲ್ಲಿ ಉತ್ತರಾಖಂಡ್‌ದಲ್ಲಿರುವ ನಾಲ್ಕು ಚಾರ್‌ಧಾಮ್‌ಗಳಲ್ಲಿ ಒಂದಾದ ಗಂಗೋತ್ರಿಧಾಮ್ ದ್ವಾರಗಳನ್ನು ನಿನ್ನೆ ಮುಚ್ಚಲಾಯಿತು. ಉತ್ತರ ಕಾಶಿ ಜಿಲ್ಲೆಯಲ್ಲಿರುವ ಗಂಗೋತ್ರಿಧಾಮಕ್ಕೆ ಈ ವರ್ಷ ೮ ಲಕ್ಷಕ್ಕೂ ಅಧಿಕ ಯಾತ್ರಾರ್ಥಿಗಳು ಭೇಟಿ ನೀಡಿದ್ದಾರೆ. ಇಂದು ಬೈದೂಜ್ ಆಚರಣೆ ಸಂದರ್ಭದಲ್ಲಿ ರುದ್ರಪ್ರಯಾಗದಲ್ಲಿರುವ ಕೇದರಾನಾಥ ಧಾಮ ಹಾಗೂ ಉತ್ತರ ಕಾಶಿಯಲ್ಲಿರುವ ಯಮುನೋತ್ರಿ ಧಾಮಗಳ ದ್ವಾರಗಳನ್ನು ಸಂಪ್ರದಾಯದಂತೆ ಮುಚ್ಚುವ ಸಿದ್ಧತೆಗಳು ನಡೆದಿವೆ.

<><*<><>*><>

ಮುಂಬೈ ವಾಂಖಡೆ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮೂರನೇ ಹಾಗೂ ಅಂತಿಮ ಟೆಸ್ಟ್ ಕ್ರಿಕೆಟ್ ಪಂದ್ಯದ ಎರಡನೇ ದಿನವಾದ ನಿನ್ನೆ ಭಾರತದ ವಿರುದ್ದ ನ್ಯೂಜಿಲೆಂಡ್ ಒಟ್ಟು ೧೪೩ ರನ್‌ಗಳ ಮುನ್ನಡೆ ಪಡೆದಿದೆ. ದಿನದಾಟದ ಮುಕ್ತಾಯಕ್ಕೆ ನ್ಯೂಜಿಲೆಂಡ್ ತನ್ನ ಎರಡನೇ ಇನ್ನಿಂಗ್ಸ್‌ನಲ್ಲಿ ೪೩.೩ ಓವರ್‌ಗಳಲ್ಲಿ ೯ ವಿಕೆಟ್ ನಷ್ಟಕ್ಕೆ ೧೭೧ ರನ್ ಗಳಿಸಿ ಆಟವಾಡುತ್ತಿದೆ. ನ್ಯೂಜಿಲೆಂಡ್ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೨೩೫ ರನ್ ಗಳಿಸಿದೆ. ಇದಕ್ಕೂ ಮುನ್ನ ಭಾರತ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ನಿನ್ನೆ ೪ ವಿಕೆಟ್ ನಷ್ಟಕ್ಕೆ ೮೬ ರನ್‌ಗಳಿಂದ ಆಟ ಮುಂದುವರೆಸಿ, ೨೬೩ ರನ್ ಗಳಿಸಿತು.  ಶುಭ್‌ಮನ್‌ಗಿಲ್ ೯೦, ರಿಷಬ್ ಪಂತ್ ೬೦ ರನ್ ಗಳಿಸಿದರು. ಇಂದು ನ್ಯೂಜಿಲೆಂಡ್ ತಂಡ ಆಟ ಮುಂದುವರೆಸಲಿದೆ.

**<><*<><>*><>**

ಜರ್ಮನಿಯಲ್ಲಿ ನಡೆಯುತ್ತಿರುವ ಹೈಲೋ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಮಾಳವಿಕಾ ಬನ್ಸೋದ್ ಮಹಿಳಾ ಸಿಂಗಲ್ಸ್ ವಿಭಾಗದ ಫೈನಲ್ಸ್‌ಗೆ ಲಗ್ಗೆ ಇಟ್ಟಿದ್ದಾರೆ. ನಿನ್ನೆ ನಡೆದ ಸೆಮಿಫೈನಲ್‌ನಲ್ಲಿ ಮಾಳವಿಕಾ, ಡೆನ್ಮಾರ್ಕ್‌ನ ಜೂಲಿ ಡಾವಾಲ್ ಜಾಕೋಬ್‌ಸೆನ್ ವಿರುದ್ಧ ೨೩-೨೧, ೨೧-೧೮ ಸೆಟ್‌ಗಳ ಅಂತರದಲ್ಲಿ ಜಯ ಸಾಧಿಸಿ ಫೈನಲ್ ಪ್ರವೇಶಿಸಿದರು.  ಇಂದು ನಡೆಯುವ ಫೈನಲ್ ಪಂದ್ಯದಲ್ಲಿ ಮಾಳವಿಕಾ ಮತ್ತೊರ್ವ ಡೆನ್ಮಾರ್ಕ್ ಆಟಗಾರ್ತಿ ಏಳನೇ ಶ್ರೇಯಾಂಕದ ಮಿಯಾ ಬ್ಲಿಚ್‌ಫೆಲ್ಡ್ ಅವರನ್ನು ಎದುರಿಸಲಿದ್ದಾರೆ.

**<><*<><>*><>**

ಸ್ವಿಡ್ಜರ್‌ಲ್ಯಾಂಡ್‌ನ ಲಾಸೆನ್ನೆದಲ್ಲಿ ನಡೆಯುತ್ತಿರುವ ಸ್ವಿಸ್ ಓಪನ್ ಹೊಳಾಂಗಣ ಬಿಲ್ಲುಗಾರಿಕೆ ಟೂರ್ನಿಯಲ್ಲಿ ಭಾರತದ ಅತನು ದಾಸ್ ಕಂಚಿನ ಪದಕ ಗೆದ್ದುಕೊಂಡಿದ್ದಾರೆ. ಒಲಿಂಪಿಕ್ ಸ್ಪರ್ಧಿ ಅತನು ದಾಸ್, ಪುರುಷರ ರೀ ಕರ್ವ್ ಕಂಚಿನ ಪದಕದಲ್ಲಿ ಸ್ವಿಡ್ಜರ್‌ಲ್ಯಾಂಡ್‌ನ ಥಾಮಸ್ ರೂಫರ್ ಅವರನ್ನು ೬-೪ ಅಂಕಗಳ ಅಂತರದಲ್ಲಿ ಸೋಲಿಸಿ ಪದಕ ಜಯಿಸಿದ್ದಾರೆ. ಇದಕ್ಕೂ ಮುನ್ನ ಅತನು ದಾಸ್ ಸೆಮಿಫೈನಲ್‌ನಲ್ಲಿ ಫ್ರಾನ್ಸ್‌ನ ರೊಮೆನ್ ಪಿಚೆಟ್ ವಿರುದ್ಧ ಸೋಲನುಭವಿಸಿದ್ದರು.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಅಪರಾಹ್ನ ೧೨ ಕ್ಕೆ <>*><>**